16



# ಸನ್ನಿವೇಶ ರಚನೆ

**319**

ಸೂಚನೆ :

- ಚಿತ್ರದಲ್ಲಿರುವ ಸನ್ನಿವೇಶವನ್ನು ಗಮನಿಸಲು ತಿಳಿಸಿ, ವಿವರಣೆಯಲ್ಲಿರುವ ಮುಖ್ಯ ಪದಗಳನ್ನು ಬಳಸಿ ಮಾತನಾಡಲು ಮಕ್ಕಳಿಗೆ ಅವಕಾಶ ನೀಡಿ.
- ಶಿಕ್ಷಕರು ಸನ್ನಿವೇಶವನ್ನು ಅರ್ಥಮಾಡಿಕೊಂಡು ಮುಖ್ಯ ಪದಗಳನ್ನು ಆದರಿಸಿ ವಿವರಿಸಿ.

## ಝರಿ ಘಟ ಫಲ ಖಗ

ರಾಮಪುರ ಒಂದು ಪುಟ್ಟ ಹಳ್ಳಿ. ಬೆಟ್ಟಗಳ ನಡುವೆ ಒಂದು ಝರಿ ಹರಿಯುತ್ತಿದೆ. ಝರಿಯ ಒಂದು ಬದಿಯಲ್ಲಿ ಫಲದ ಮರವಿದೆ.

ಬಸವ ಒಬ್ಬ ಕುಂಬಾರ, ಅವನು ಮಾಡಿದ ಘಟಗಳನ್ನು ಪೇಟೆಗೆ ಹೋಗಿ ಮಾರುತ್ತಾನೆ. ದಾರಿಯಲ್ಲಿ ವಿರಾಮ ಪಡೆಯಲು ಗಾಡಿಯನ್ನು ನಿಲ್ಲಿಸುತ್ತಿದ್ದಾನೆ.

ಈ ಝರಿಯ ನೀರಲ್ಲಿ ಬಹಳ ಮೀನುಗಳಿವೆ. ಮೀನುಗಳನ್ನು ತಿನ್ನಲು ಖಗಗಳು ಬಂದಿವೆ.



a



17



# ಸನ್ನಿವೇಶ ರಚನೆ

337

ಸೂಚನೆ :

- ಚಿತ್ರದಲ್ಲಿರುವ ಸನ್ನಿವೇಶವನ್ನು ಗಮನಿಸಲು ತಿಳಿಸಿ, ವಿವರಣೆಯಲ್ಲಿರುವ ಮುಖ್ಯ ಪದಗಳನ್ನು ಬಳಸಿ ಮಾತನಾಡಲು ಮಕ್ಕಳಿಗೆ ಅವಕಾಶ ನೀಡಿ.
- ಶಿಕ್ಷಕರು ಸನ್ನಿವೇಶವನ್ನು ಅರ್ಥಮಾಡಿಕೊಂಡು ಮುಖ್ಯ ಪದಗಳನ್ನು ಆದರಿಸಿ ವಿವರಿಸಿ.

## ಚೆಂಡು ಘಂಟೆ ಉಂಗುರ ತೆಂಗಿನಮರ

ಇದು ನಮ್ಮ ಊರಿನ ಚರ್ಚು, ಚರ್ಚಿನ ಘಂಟೆ ಬೆಳಿಗ್ಗೆ ಮತ್ತು ಸಂಜೆ ಬಾರಿಸುತ್ತಾರೆ. ಇಲ್ಲಿ ತೆಂಗಿನಮರಗಳು ಬಹಳ ಉದ್ದವಾಗಿ ಬೆಳೆದಿವೆ.

ರಾಜು ಮತ್ತು ಅವನ ಗೆಳೆಯರು ಕ್ರಿಕೆಟ್ ಆಡುತ್ತಿದ್ದಾರೆ. ಚೆಂಡನ್ನು ಬಾರಿಸಿದಾಗ ಸುನೀಲ್ ಮಾಮನ ಮನೆಯ ಕಿಟಕಿಯ ಗಾಡು ಒಡೆದು ಹೋಗಿತ್ತು. ಸುನೀಲ್ ಮಾಮ ಬಂದು ಬೈಯುತ್ತಿದ್ದಾರೆ. ಮೇರಿ ಮತ್ತು ಜಾನ್ ಚೆಂಡು ಆಡುತ್ತಿದ್ದಾರೆ.

ರೀನಾಳ ಹೊಸ ಉಂಗುರವನ್ನು ಸೀಮಾಳಿಗೆ ತೋರಿಸುತ್ತಿದ್ದಾಳೆ.

